**ಸಾಕ್ಷಿಯನ್ನು ದಿಃ16.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ಈ ಪ್ರಕರಣದಲ್ಲಿ ನೀವು ಹಾಜರುಪಡಿಸಿದ ಪಹಣಿಗಳು ಯಾರ ಹೆಸರಿನಲ್ಲಪಿವೆ ಎಂದರೆ, ನಮ್ಮ ಮಾವನ ತಂದೆ ತಾಯಿ ಹೆಸರಿನಲ್ಲಿವೆ.

2. ನನ್ನ ಮಾವನ ತಂದೆಗೆ 3 ಜನ ಮಕ್ಕಳು.ಅವರಲ್ಲಿ ಇಬ್ಬರು ಗಂಡು ಹಾಗೂ ಒಬ್ಬ ಹೆಣ್ಣು ಮಗಳು. ಅವರಿಗೆ ಸುಮಾರು 15 ಎಕರೆ ಜಮೀನು ಇವೆ. ನನ್ನ ಮಾವನ ತಂದೆ ತಾಯಿಗೆ ಸ್ವಲ್ಪ ಸ್ವಯಾರ್ಜಿತ ಹಾಗೂ ಪಿತ್ರಾರ್ಜಿತ ಇವೆ.

3. ನಾನು ಪಹಣಿಗಳನ್ನು ಹಾಜರುಪಡಿಸಿದ ಸರ್ವೇ ನಂಬರ್ ನನಗೆ ಹೇಳಲು ನೆನಪಿಲ್ಲ.

4. ನೀವು ಹಾಜರುಪಡಿಸಿದ ಯಾವುದೇ ಪಹಣಿಗಳು ನಿಮ್ಮ ಮಾವನ ಹೆಸರಿನಲ್ಲಿ ಇಲ್ಲ ಎಂದರೆ, ಸರಿ.

5. ನೀವು ಹಾಜರುಪಡಿಸಿದ ಪಹಣಿಗಳ ವಿಸ್ತೀರ್ಣ ಎಷ್ಟು ಎಂದರೆ, 8 ಎಕರೆ ಇರಬಹುದು. ಸದರಿ ಜಮೀನುಗಳ ವಿಭಾಗ ಆಗಿವೆ. ಆ ಬಗ್ಗೆ ರಿಜಿಸ್ಟರ್ ಆಗಿಲ್ಲ.

6. ಎದುರುದಾರರಿಗೆ 4 ಎಕರೆ ಜಮೀನು ಹಾಗೂ 3 ಎಕರೆ ಗದ್ದೆ ಕೊಟ್ಟಿದ್ದಾರೆ.

7. ನೀವು ಹಾಜರುಪಡಿಸಿದ ಪಹಣಿಗಳು ಈಗಲೂ ಎದುರುದಾರರ ಅಜ್ಜಿ ತಾತನ ಹೆಸರಿನಲ್ಲದ್ದು, ಅವರ ಸಹೋದರರ ಹೆಸರಿಗೆ ಸಹ ಇನ್ನೂ ಖಾತೆ ಆಗಿಲ್ಲ, ಈಗಲೂ ಅವರೆ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ನಾವೇ ವ್ಯವಸಾಯ ಮಾಡುತ್ತಿದ್ದೆವು.

8. ನಿಮ್ಮ ಮಾವನವರು ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

9. ಎದುರುದಾರರಿಗೆ ನೀವು ಹೇಳುವಂತೆ 10 ಲಕ್ಷ ಆದಾಯ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಯಾವುದೇ ಜಮೀನು ಇಲ್ಲ ಹಾಗೂ ವ್ಯವಸಾಯ ಮಾಡದೇ ಇರುವ ಕಾರಣ ಅವರಿಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ.

10. ನಿಮ್ಮ ಅತ್ತೆ ಹಾಗೂ ಮಾವನಿಗೆ ಈಗ ವಯಸ್ಸಾಗಿದೆ ಎಂದರೆ ಸರಿ. ಅವರಿಗೆ ಈಗ ದುಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ, ನಮ್ಮ ಅತ್ತೆ ಶಾಲೆಗೆ ಅಡುಗೆ ಮಾಡಲು ಹೋಗುತ್ತಾರೆ.

11. ನಿಮ್ಮ ಪತಿಗೆ ಅಪೆಂಡಿಕ್ಸ ಆಪರೇಶನ್ ಆಗಿದೆ ಎಂದರೆ ಸರಿ. ಅವರಿಗೆ ಈಗ ಜಾಸ್ತಿ ಕೆಲಸ ಮಾಡಲು ಆಗುವುದಿಲ್ಲ ಎಂದರೆ, ನನಗೆ ಗೊತ್ತಿಲ್ಲ. ಅವರು ಆಸ್ಪತ್ರೆಯ ಲ್ಯಾಬಿನಲ್ಲಿ ಕೆಲಸಕ್ಕೆ ಹೋಗುತ್ತಾರೆ ಹಾಗೂ ಬಿಡುವು ಸಿಕ್ಕಾಗ ಪೋಟೋಗ್ರಾಪ್ ಕೆಲಸ ಮಾಡುತ್ತಾರೆ. ಅವರು ಪೋಟೋ ತೆಗೆಯಲು ಕೂಲಿ ಮೇಲೆ ಹೋಗುತ್ತಾರೆ ಎಂದರೆ, ಸ್ವಂತ ಕ್ಯಾಮರಾ ಇದೆ.

12. ಎದುರುದಾರರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವರಿಗೆ ಯಾವುದೇ ಕೆಲಸ ಮಾಡದೇ ಮನೆಯಲ್ಲಿದ್ದು, ನಿಮಗೆ ಜೀವನಾಂಶ ಕೊಡಲು ಆಗುವುದಿಲ್ಲ ಎಂದರೆ, ಸರಿಯಲ್ಲ.

13. ನಿಮ್ಮ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ವಿಚಾರಗಳಿಂದ ಕೂಡಿವೆ ಎಂದರೆ ಸರಿಯಲ್ಲ.

14. ಎದುರುದಾರರು ಯಾವುದೇ ತೊಂದರೆ ನೀಡದೇ ಇದ್ದರೂ, ಸುಳ್ಳು ಆರೋಪ ಮಾಡಿ ಸುಳ್ಳು ಅರ್ಜಿ ಹಾಕಿದ್ದೀರಾ ಎಂದರೆ ಸರಿಯಲ್ಲ.

15. ನೀವು ಸ್ವಂತ ದುಡಿಮೆ ಮಾಡುತ್ತೀರಾ ಎಂದರೆ, ಕೂಲಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ.

16. ನೀವು ಬ್ಯಾಂಗಲ್ ಸ್ಟೋರ್ ಇಟ್ಟುಕೊಂಡಿದ್ದೀರಾ ಎಂದರೆ ಸರಿ. ಅದರಿಂದ ನೀವು ಲಕ್ಸುರಿ ಜೀವನ ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ